ಹಾಸನ ನಗರ ಗೃಹ ನಿರ್ಮಾಣ ಸಹಕಾರ ಸಂಘ ನಿ.,
ದೇವರಾಜ ಅರಸ್ ಮಾರ್ಕೆಟ್, ಹಾಸನ. ☎ 264825

ವಾರ್ಷಿಕ ಬಡ್ಡಿ ದರದ ವಿವರಗಳು	ಸಾಮಾನ್ಯರಿಗೆ %	ಹಿರಿಯ ನಾಗರಿಕರಿಗೆ %
* 1 ವರ್ಷದಿಂದ 3 ವರ್ಷಗಳವರೆಗೆ	10.5	11
* 181ದಿನಗಳಿಂದ 365 ದಿನಗಳವರೆಗೆ	8	8.5
* 91 ದಿನಗಳಿಂದ 180 ದಿನಗಳವರೆಗೆ	7	7.5
* 31 ದಿನಗಳಿಂದ 90 ದಿನಗಳವರೆಗೆ	6	6.5
* 90 ತಿಂಗಳುಗಳಲ್ಲಿ ಠೇವಣಿ ಮೊತ್ತ ದ್ವಿಗುಣ		

-ಅಧ್ಯಕ್ಷರು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ

41ನೇ ವರ್ಷದಲ್ಲಿ

ಜನತಾ ಮಾಧ್ಯಮ

ಸಂಪಾದಕ : ಆರ್.ಪಿ.ವೆಂಕಟೇಶಮೂರ್ತಿ

ವ್ಯವಸ್ಥಾಪಕ ಸಂಪಾದಕ : ಎಸ್.ಎನ್.ಮಂಜುನಾಥದತ್ತ

PREMIER MARKETING
#817/A,Opp: Mallige Residency,Govt.High School Field,Road,Hassan.
Ph:9620621333
9448742971
9844090035
08172-233509
Dr.Aquaguard
RO+UV+TDS Controller Water Purifier & Water Softner

ರಷ್ಯಾ ಪ್ಯಾಸೆಂಜರ್ ವಿಮಾನ ಪತನ : 71 ಸಾವು

ಸುಮಾರು 71 ಪ್ರಯಾಣಿಕರಿದ್ದ ಪ್ರಯಾಣಿಕ ವಿಮಾನವೊಂದು ರಷ್ಯಾ ರಾಜಧಾನಿ ಮಾಸ್ಕೋದಲ್ಲಿ ಭಾನುವಾರ ಪತನವಾಗಿದ್ದು, ವಿಮಾನದಲ್ಲಿದ್ದ ಎಲ್ಲ ಪ್ರಯಾಣಿಕರೂ ಸಾವನ್ನಪ್ಪಿದ್ದಾರೆ ಎಂದು ತಿಳಿದು ಬಂದಿದೆ. ಮಾಸ್ಕೋದ ಡೊಮೊಡೆಡೋವೊ ವಿಮಾನ ನಿಲ್ದಾಣದ ಹೊರ ಆವರಣದಲ್ಲಿ ಅಂಟಾನೋವ ಎಎನ್148 ವಿಮಾನ ಪತನವಾಗಿದೆ.

ಸೇನಾ ಶಿಬಿರದ ಮೇಲೆ ಉಗ್ರರ ದಾಳಿ : ಸಾವಿನ ಸಂಖ್ಯೆ 6ಕ್ಕೆ ಏರಿಕೆ

ಕಣಿವೆ ರಾಜ್ಯ ಜಮ್ಮು-ಕಾಶ್ಮೀರದ ಸುಂಜುವಾನ್ ಸೇನಾ ಶಿಬಿರದ ಮೇಲೆ ಉಗ್ರರು ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾವನ್ನಪ್ಪಿದವರ ಸಂಖ್ಯೆ 6ಕ್ಕೆ ಏರಿಕೆಯಾಗಿದ್ದು, ನಾಲ್ವರು ಉಗ್ರರನ್ನು ಸೇನಾಪಡೆ ಸದೆ ಬಡಿದಿದೆ. 2016ರಲ್ಲಿ ನಡೆದ ಉರಿ ದಾಳಿಯ ನಂತರ ಇದೇ ಮೊದಲ ಬಾರಿಗೆ ನಡೆದಿರುವ ದೊಡ್ಡ ಪ್ರಮಾಣದ ದಾಳಿ ಇದಾಗಿದೆ.

'ನನ್ನ ಜನ್ಮ ಭೂಮಿ ತಮಿಳುನಾಡು ಸುಭಿಕ್ಷವಾಗಿಲ್ಲ'

ನನ್ನ ಜನ್ಮಭೂಮಿ ತಮಿಳುನಾಡು ಸುಭಿಕ್ಷವಾಗಿಲ್ಲ. ಆದ ಕಾರಣ ಅಲ್ಲಿನ ಪ್ರತಿಯೊಂದು ಜಿಲ್ಲೆಯ ಗ್ರಾಮಗಳನ್ನು ದತ್ತು ಪಡೆಯುವುದಾಗಿ ನಟ ಕಮಲ್ ಹಾಸನ್ ಭಾನುವಾರ ಘೋಷಿಸಿದ್ದಾರೆ. ಇಂಗ್ಲೆಂಡ್‌ನ ಕೇಂಬ್ರಿಡ್ಜ್ ಹಾರ್ವರ್ಡ್ ವಿಶ್ವವಿದ್ಯಾಲಯದಲ್ಲಿ ಆಯೋಜಿಸಿದ್ದ ಭಾರತೀಯ ವಾರ್ಷಿಕ ಸಮ್ಮೇಳನದಲ್ಲಿ ಭಾಗವಹಿಸಿದ್ದ ಅವರು, ಇತ್ತೀಚೆಗೆ ರಾಜ್ಯದಲ್ಲಿ ಎದುರಾದ ರಾಜಕೀಯ ಬಿಕ್ಕಟ್ಟಿನಿಂದಾಗಿ ನನ್ನ ರಾಜ್ಯ ಕಂಗೆಟ್ಟಿದೆ ಎಂದಿದ್ದಾರೆ.

ಜನತಾಮಾಧ್ಯಮ ಬೆಳಗಿನ ದೈನಿಕ JANATHAMADHYAMA KARKAN. RNI 41566. ಸಂಪುಟ : 41 ಸಂಚಿಕೆ :81 ಸೋಮವಾರ ಫೆ.12, 2018 ದೂರವಾಣಿ : 268494 ಪುಟ-4 ರೂ.2-00 NO. HSN-761/ 2018-20

ರಾಜ್ಯದಲ್ಲಿ ಮದ್ಯಪಾನ ನಿಷೇಧ ಅಸಾಧ್ಯ

ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ

ಬೆಂಗಳೂರು : ರಾಜ್ಯದಲ್ಲಿ ಮದ್ಯಪಾನ ನಿಷೇಧ ಸಾಧ್ಯವೇ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರಾಯಚೂರಿನ ಸಿಂಧನೂರಿನಲ್ಲಿ ಭಾನುವಾರ ನಡೆದ ರೈತರ ಜತೆಗಿನ ಸಂವಾದದಲ್ಲಿ ರೈತ ಮಹಿಳೆಯೊಬ್ಬರು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಅವರನ್ನು ರಾಜ್ಯದಲ್ಲಿ ಮದ್ಯಪಾನ ಮಾರಾಟ ನಿಷೇಧಿಸುವಂತೆ ಮನವಿ ಮಾಡಿದರು. ಇದಕ್ಕೆ ಉತ್ತರಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರಾಜ್ಯದಲ್ಲಿ ಮದ್ಯಪಾನ ನಿಷೇಧ ಸಾಧ್ಯವಿಲ್ಲ. ದೇಶದಲ್ಲಿ ಕೆಲ ರಾಜ್ಯಗಳು ಮಾಡಿದ ಮದ್ಯಪಾನ ನಿಷೇಧ ಯಶಸ್ವಿಯಾಗಿಲ್ಲ. ಬಿಹಾರದಲ್ಲಿ ಸಾರಾಯಿ ನಿಷೇಧ ವಿದ್ದರೂ ಅಕ್ರಮವಾಗಿ ನಡೆಯುತ್ತಿದೆ. ನಾನು ಯಾವುದೇ ವಿಚಾರವನ್ನು ಕರ್ನಾಟಕದ ಮೇಲೆ ಹೇರಲ್ಲ ಎಂದು ಹೇಳಿದರು.

ಕರ್ನಾಟಕದ ಮಹಿಳೆಯರು ಪಾನನಿಷೇಧದ ಬಗ್ಗೆ ಒತ್ತಾಯ ಮಾಡುತ್ತಿದ್ದಾರೆ. ಇದರ ಸಾಧಕ ಬಾಧಕಗಳ ಬಗ್ಗೆ ಚರ್ಚೆಯಾಗಬೇಕು. ಇದು ಗಂಭೀರವಾದ ಸಮಸ್ಯೆ. ಇದರ ಬಗ್ಗೆ ಚರ್ಚೆಯಾಗೋದು ಮುಖ್ಯ. ಮದ್ಯಪಾನ ನಿಷೇಧದ ಕುರಿತು ಮಹಿಳೆಯರ ಅನಿಸಿಕೆ ತುಂಬಾ ದೃಢವಾಗಿದೆ ಎಂದು ಸಿದ್ದರಾಮಯ್ಯ ಹೇಳಿದರು.

ಬಿಜೆಪಿ ದೂರವಿಡಿ : ರಾಹುಲ್ ವಾಗ್ದಾಳಿ



ಕುಷ್ಟಗಿ : ಕರ್ನಾಟಕ ರಾಜ್ಯದಲ್ಲಿ ಅಧಿಕಾರದಲ್ಲಿದ್ದಾಗ ಭ್ರಷ್ಟಾಚಾರದಲ್ಲಿ ನಂ.1 ಎಂಬ ದಾಖಲೆ ಮಾಡಿದ್ದ ಬಿಜೆಪಿಯನ್ನು ಅಧಿಕಾರದಿಂದ ದೂರವಿಡಿ. ರಾಜ್ಯವನ್ನು ಪ್ರಗತಿಯತ್ತ ಮುನ್ನಡೆಸಲು ಕಾಂಗ್ರೆಸ್‌ನ್ನು ಮತ್ತೆ ಅಧಿಕಾರಕ್ಕೆ ತನ್ನಿ ಎಂದು ಕಾಂಗ್ರೆಸ್ ಅಧ್ಯಕ್ಷ ರಾಹುಲ್ ಗಾಂಧಿ ಮನವಿ ಮಾಡಿದರು.

ಹೈದರಾಬಾದ್ ಕರ್ನಾಟಕ ಭಾಗದ ತಮ್ಮ ಪ್ರವಾಸದ 2ನೇ ದಿನವಾದ ಭಾನುವಾರ ಕುಷ್ಟಗಿಯಲ್ಲಿ ರೋಡ್ ಶೋ ನಡೆಸಿದ ನಂತರ ಪಟ್ಟಣದಲ್ಲಿ ನೆರೆದಿದ್ದ ಅಪಾರ ಜನಸ್ತೋಮವನ್ನು ಉದ್ದೇಶಿಸಿ ಭಾಷಣ ಮಾಡಿದ ಅವರು, ಬಿಜೆಪಿ ತನ್ನ ಆಳ್ವಿಕೆಯಲ್ಲಿ ಕರ್ನಾಟಕ ದೇಶದಲ್ಲೇ ಅತಿ ಹೆಚ್ಚು ಭ್ರಷ್ಟಾಚಾರ ನಡೆಸಿದ ಕೀರ್ತಿಗೆ ಭಾಜನವಾಗಿತ್ತು. ಅವರ ಆಳ್ವಿಕೆಯಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ಸೇರಿದಂತೆ ಸಚಿವರು ಜೈಲಿಗೆ ಹೋಗಿದ್ದರು. 11 ಮಂದಿ ರಾಜಿನಾಮೆ ನೀಡಿದ್ದರು ಎಂದು ವಾಗ್ದಾಳಿ ನಡೆಸಿದರು. *(-ಹೆಚ್ಚಿನ ವಿವರ 4ನೇ ಪುಟಕ್ಕೆ)*

ವೈದ್ಯಕೀಯ ಕಾಲೇಜು ಎನ್.ಎಸ್.ಎಸ್. ಶಿಬಿರ ಆರಂಭ

ಹಾಸನ : ನಗರದ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವು ಅರಸೀಕೆರೆಯ ಕರಗುಂದ ಸರ್ಕಾರಿ ಪ್ರೌಢಶಾಲೆಯಲ್ಲಿ ಫೆಬ್ರವರಿ 11ರಂದು ಆರಂಭಗೊಂಡಿದ್ದು, ಫೆ.17ರ ತನಕ ನಡೆಯಲಿದೆ.

ಶ್ರಮದಾನ, ಉಚಿತ ಆರೋಗ್ಯ ತಪಾಸಣೆ, ರಕ್ತ ಗುಂಪು ಪರೀಕ್ಷೆ, ರಕ್ತದಾನ ಶಿಬಿರ, ದೇವಸ್ಥಾನ, ಪರಿಸರ ಮತ್ತು ಗ್ರಾಮ ನೈರ್ಮಲ್ಯೀಕರಣ, ಕುಟುಂಬ ಆರೋಗ್ಯ ಸಮೀಕ್ಷೆ , ಕಾನೂನು ಅರಿವು, ಸರ್ಕಾರಿ ಇಲಾಖೆಗಳ ಕಾರ್ಯಕ್ರಮಗಳ ಪರಿಚಯ ಮುಂತಾದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

2,000 ರೂ. ಖೋಟಾ ನೋಟು ಪತ್ತೆ

ಸಾರ್ವಜನಿಕರು, ವರ್ತಕರ ವಲಯದಲ್ಲಿ ಆತಂಕ

ಬೇಲೂರು : ಕಳೆದ ಕೆಲ ದಿನಗಳ ಹಿಂದೆ ಪಟ್ಟಣದಲ್ಲಿ 2 ಸಾವಿರ ರೂ.ಗಳ ಖೋಟಾ ನೋಟು ಪತ್ತೆಯಾಗಿರುವುದು ಸಾರ್ವಜನಿಕರ ಹಾಗೂ ವರ್ತಕರ ವಲಯದಲ್ಲಿ ಆತಂಕಕ್ಕೆ ಕಾರಣವಾಗಿದೆ.

ತಾಲ್ಲೂಕಿನಲ್ಲಿ ಕಳೆದ ಕೆಲ ದಿನಗಳ ಹಿಂದೆ ಎಲ್ಐಸಿ ಏಜೆಂಟರೊಬ್ಬರು ಬೇಲೂರು ಪಟ್ಟಣದ ಎಲ್ಐಸಿ ಕಚೇರಿಗೆ ಗ್ರಾಹಕರುಗಳ ವಿಮಾ ಕಂತಿನ ಹಣವನ್ನು ಕಟ್ಟಲು ತೆರಳಿದ್ದ ಸಂದರ್ಭದಲ್ಲಿ 2 ಸಾವಿರ ರೂ.ಗಳ ಖೋಟಾ ನೋಟು ಪತ್ತೆಯಾಗಿದೆ. ಆದರೆ ಎಲ್ಐಸಿ ಏಜೆಂಟರಿಗೆ ಈ ಖೋಟಾ ನೋಟನ್ನು ಯಾರು ಕೊಟ್ಟಿದ್ದಾರೆ ಎಂಬುದರ ಬಗ್ಗೆ ಖಚಿತ ಮಾಹಿತಿ ಇಲ್ಲದಂತಾಗಿದೆ. ಈ ಬಗ್ಗೆ ಗ್ರಾಹಕರನ್ನು ವಿಚಾರಿಸಿದರೆ ಅವರೂ ಸಹ ನಾವು ಕೊಟ್ಟಿಲ್ಲ ಎನ್ನುತ್ತಿದ್ದಾರೆ ಎಂದು ತಿಳಿದು ಬಂದಿದೆ.



ತಾಲ್ಲೂಕಿನಲ್ಲಿ ಖೋಟಾ ನೋಟಿನ ಹಾವಳಿ ಹೆಚ್ಚಾಗಿದ್ದು, ಸಾರ್ವಜನಿಕರಲ್ಲಿ ಆತಂಕ ಸೃಷ್ಟಿಸಿದೆ. ಖೋಟಾ ನೋಟು ಚಲಾವಣೆ ಹೆಚ್ಚಾಗುವುದಕ್ಕೂ ಮುನ್ನ ಸಂಬಂಧಿಸಿದ ಅಧಿಕಾರಿಗಳು ಎಚ್ಚೆತ್ತು ಈ ನೋಟಿನ ಚಲಾವಣೆಗೆ ಕಡಿವಾಣ ಹಾಕಬೇಕಿದೆ ಎಂಬುದು ಸಾರ್ವಜನಿಕರ ಅಭಿಪ್ರಾಯವಾಗಿದೆ.

ಚಿತ್ರದಲ್ಲಿರುವ 2 ಸಾವಿರ ರೂ.ನ 2 ನೋಟುಗಳನ್ನು ವೀಕ್ಷಿಸಿದಲ್ಲಿ ಬಲಭಾಗದಲ್ಲಿ ಖೋಟಾ ಆಗಿರುವುದನ್ನು ಕಾಣಬಹುದಾಗಿದೆ.

'ದುಂದು ವೆಚ್ಚ ಬೇಡ- ಲೋಕ ಕಲ್ಯಾಣದಲ್ಲಿ ತೊಡಗಿಸಿಕೊಳ್ಳಿ'

ನುಗ್ಗೇಹಳ್ಳಿ (ಚನ್ನರಾಯಪಟ್ಟಣ) : ಮದುವೆ, ಮನೆ ನಿರ್ಮಾಣ, ಇನ್ನಿತರವುಗಳಿಗೆ ದುಂದು ವೆಚ್ಚ ಮಾಡುವ ಬದಲು ಧಾರ್ಮಿಕವಾಗಿ ಲೋಕ ಕಲ್ಯಾಣದಲ್ಲಿ ತೊಡಗಿಸಿಕೊಂಡಲ್ಲಿ ಪುಣ್ಯ ಲಭಿಸುತ್ತದೆ ಎಂದು ಆದಿಚುಂಚನಗಿರಿ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಹೇಳಿದರು.

ಬಾಗೂರು ಹೋಬಳಿ ದಡ್ಡೀಹಳ್ಳಿ ಹಾಗೂ ಚೌಡೇನಹಳ್ಳಿ ಕೆರೆ ಹಿಂಭಾಗದ ಪುರಾಣ ಪ್ರಸಿದ್ಧ ಶ್ರೀ ನೀಲಕಂಠೇಶ್ವರ ಸ್ವಾಮಿ ನೂತನ ದೇಗುಲ, ವಿಮಾನ ಗೋಪುರ, ಕುಂಭಾಭಿಷೇಕದ ಉದ್ಘಾಟನೆಯನ್ನು ಭಾನುವಾರ ನೆರವೇರಿಸಿದ ನಂತರ ಧಾರ್ಮಿಕ ಸಮಾರಂಭದಲ್ಲಿ ಅವರು ಮಾತನಾಡಿದರು.

ಇತ್ತೀಚಿನ ವರ್ಷಗಳಲ್ಲಿ ವಾಡಿಕೆ ಮಳೆಯಿಲ್ಲದೆ ಬರದ ವಾತಾವರಣ ಸೃಷ್ಟಿಯಾಗಿತ್ತು. ಆದರೆ ಈ ಬಾರಿ ಉತ್ತಮ ಮಳೆ ಕಂಡಿದ್ದೇವೆ. ಕೆಲವರು ಗಳಿಸಿ ಕೂಡಿಟ್ಟ ಹಣವನ್ನು ಮದುವೆ, ಮನೆ ನಿರ್ಮಾಣ ಇನ್ನಿತರ ಕಾರ್ಯಗಳಿಗೆ ಹೆಚ್ಚಿಗೆ ವ್ಯಯಿಸಿ ಸಾಲದ ಸುಳಿಗೆ ಸಿಲುಕಿಕೊಳ್ಳುತ್ತಿದ್ದಾರೆ ಎಂದರು.

ಪಟ್ಟಣ, ನಗರ ಪ್ರದೇಶಗಳಲ್ಲಿ ದುಬಾರಿ ವೆಚ್ಚದ ಕಟ್ಟಡ ನಿರ್ಮಾಣ, ಕಲ್ಯಾಣ ಮಂಟಪಗಳಿಗೆ ಲಕ್ಷಗಟ್ಟಲೇ ಬಾಡಿಗೆ ಕಟ್ಟುವ ಬದಲು ಹಳ್ಳಿಗಳ ಧಾರ್ಮಿಕ ಕ್ಷೇತ್ರಗಳಲ್ಲೇ ಸರಳವಾಗಿ ಮದುವೆ, ಧಾರ್ಮಿಕ ಕಾರ್ಯಕ್ರಮಗಳನ್ನು ಮಾಡಿಕೊಂಡರೆ ಹಣವೂ ಉಳಿಯುತ್ತದೆ ಎಂದ ಅವರು, ನೀಲಕಂಠೇಶ್ವರ ಕ್ಷೇತ್ರವು ಧಾರ್ಮಿಕ ಕ್ಷೇತ್ರವಾಗಿ ವೈಭವಗೊಳ್ಳುತ್ತಿದೆ. ಪ್ರತಿ ವರ್ಷ ಶಿವರಾತ್ರಿ ದಿನ ನೀಲಕಂಠೇಶ್ವರಸ್ವಾಮಿ ಜಾತ್ರಾ ಮಹೋತ್ಸವ ನಡೆಸಬೇಕು ಎಂದರು.

(-4ನೇ ಪುಟಕ್ಕೆ)

ಮೂರು ತಿಂಗಳಾದರೂ ಪತ್ತೆಯಾಗದ ವಿದ್ಯಾರ್ಥಿನಿ

ಆಲೂರು ಪೊಲೀಸರು ಏನು ಮಾಡುತ್ತಿದ್ದಾರೆ?

ಆಲೂರು : ಪ್ರತಿಭಾವಂತ ವಿದ್ಯಾರ್ಥಿನಿಯೊಬ್ಬಳನ್ನು ಅಪಹರಿಸಿ 3 ತಿಂಗಳಾಗುತ್ತ ಬಂದರೂ, ಪತ್ತೆ ಹಚ್ಚಲು ಆಲೂರು ಪೊಲೀಸರು ಸಂಪೂರ್ಣ ವಿಫಲ ಆಗಿರುವುದರಿಂದ, ಈ ವಿದ್ಯಾರ್ಥಿನಿಯ ಭವಿಷ್ಯದ ಮೇಲೆ ಕಲ್ಲು ಚಪ್ಪಡಿ ಎಳೆದಂತಾಗಿದೆ ಮತ್ತು ಆಕೆಯ ಕುಟುಂಬದವರು ಕಣ್ಣೀರಲ್ಲಿ ಕೈ ತೊಳೆಯುತ್ತ ದಿನ ದೂಡುತ್ತಿದ್ದಾರೆ.

ಈಕೆಯ ಹೆಸರು ರಂಸೀನಾ ಕೆ.ಎಂ.; ರಾಯರಕೊಪ್ಪಲು ಸರ್ಕಾರಿ ಪದವಿಪೂರ್ವ ಕಾಲೇಜಿನ ದ್ವಿತೀಯ ಪಿ.ಯು.ಸಿ. ವಿದ್ಯಾರ್ಥಿನಿ. ಕಾಡ್ಲೂರು ಕೊಪ್ಪಲಿನ ವಾಸಿ. ಕರಡಿಬೆಟ್ಟ ಎಸ್ಟೇಟ್‌ನಲ್ಲಿ ಕೆಲಸ ಮಾಡುವ ಮಹಮ್ಮದ್ ಅಲಿ ದಂಪತಿಗಳ ಹಿರಿಯ ಪುತ್ರಿಯಾದ ಈಕೆ ಎಸ್.ಎಸ್.ಎಲ್.ಸಿ.ಯಲ್ಲಿ ಗಳಿಸಿರುವ ಅಂಕಗಳು ಈಕೆಯ ಪ್ರತಿಭೆಗೆ ಸಾಕ್ಷಿ ಹೇಳುತ್ತವೆ. ಒಟ್ಟು 625 ಅಂಕಗಳಿಗೆ 555 (88.88%). ಕನ್ನಡದಲ್ಲಿ 125ಕ್ಕೆ 123, ಸಮಾಜ ವಿಜ್ಞಾನ ನೂರಕ್ಕೆ 98, ಹಿಂದಿಯಲ್ಲಿ 97, ವಿಜ್ಞಾನ 88,ಇಂಗ್ಲಿಷ್ 85. ಗಣಿತದಲ್ಲಿ ಹೆಚ್ಚು ಗಳಿಸಿದ್ದರೆ (64 ಮಾತ್ರ)ಸರಾಸರಿ 95ರ ಹತ್ತಿರ ಇರುತ್ತಿತ್ತು. ಮುಂದೆ ತಾನು ಡಾಕ್ಟರ್ ಆಗುತ್ತೇನೆ. ತಂದೆ ತಾಯಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತೇನೆ ಎಂದೆಲ್ಲಾ ಆಕೆ ಹೇಳಿ ಕೊಳ್ಳುತ್ತಿದ್ದಳು.



ರಂಸೀನಾ ಕೆ.ಎಂ.



ರಂಸಿನಾ ದ್ವಿತೀಯ ಪಿಯುನಲ್ಲಿ ಪಡೆದ ಅಂಕ ಪಟ್ಟಿ



ರಘು

ಸುಂದರವಾಗಿಯೂ ಇದ್ದ ರಂಸೀನಾಳ ಜೊತೆ ಮದುವೆ ಪ್ರಸ್ತಾಪ ಶುರುವಾಗಿತ್ತು. ಕಳೆದ ವರ್ಷ ನವೆಂಬರ್ 12ರ ಭಾನುವಾರ ಬೆಂಗಳೂರಿನಲ್ಲಿ ಕೈತುಂಬಾ ಸಂಬಳ ತರುವ ಹುಡುಗನೊಬ್ಬನ ತಂದೆ-ತಾಯಿ ಮತ್ತು ಹತ್ತಿರದ ಬಂಧುಗಳು ಮಹಮ್ಮದ್ ಅಲಿ ಮನೆಗೆ ಬಂದು ತಮ್ಮ ಮಗನಿಗೆ ಮದುವೆ ಮಾಡಿಕೊಡಬೇಕೆಂದು ಕೇಳಿದ್ದರು. ಓದು ಮುಂದುವರಿಸುವುದಾದರೆ 3 ವರ್ಷ ಬೇಕಾದರೂ ಕಾಯುವುದಾಗಿಯೂ ಹೇಳಿದ್ದರು. ಪಿ.ಯು.ಸಿ. ಪರೀಕ್ಷೆ ಮುಗಿದ ನಂತರ ಮಾತನಾಡಬಹುದೆಂದು ಮಹಮ್ಮದ್ ಹೇಳಿ ಕಳಿಸಿ, ಮರುದಿನ ಸೋಮವಾರ ಮಗಳನ್ನು ಕಾಲೇಜಿಗೆ ಬಿಟ್ಟು ಬಂದರು. ಸಂಜೆ ಕಾಲೇಜಿನಿಂದ ಆಕೆ ವಾಪಸ್ಸಾಗಿದ್ದಳು. ರಾತ್ರಿ 8 ಗಂಟೆ ಹೊತ್ತಾಗಿರಬಹುದು. ಮನೆಯ ಹೊರಗಿರುವ ಶೌಚಾಲಯಕ್ಕೆ ಹೋಗಿ ಬರುವುದಾಗಿ ಹೇಳಿದಳು. 9 ಗಂಟೆ ಆದರೂ ವಾಪಸ್ಸು ಬಾರದಿದ್ದಾಗ ಮಗಳಿಗಾಗಿ ಹುಡುಕಾಟ ಶುರುವಾಯಿತು. ಮರುದಿನ ಬೆಳಿಗ್ಗೆಯ ಹೊತ್ತಿಗೆ ಕಾಗನೂರು ಹೊಸಳ್ಳಿಯ ಶಂಭುಗೌಡರ ಮಗ ರಘು ಮತ್ತು ಸಂಗಡಿಗರು ರಂಸೀನಾಳನ್ನು ಅಪಹರಿಸಿರಬಹುದೆಂಬ ಮಾಹಿತಿ ಬಂತು. ಪೊಲೀಸರಿಗೆ ದೂರು ನೀಡಲು ಮಹಮ್ಮದ್ ಹೊರಟಾಗ ರಘು ಕಡೆಯವರು ಹುಡುಗಿಯನ್ನು ತಂದು ಒಪ್ಪಿಸುವುದಾಗಿ ಭರವಸೆ ನೀಡಿದರು. ಸಮಯ ಜಾರಿದಂತೆ ಮಾತು ಕೊಟ್ಟವರು ತಪ್ಪಿದರು. ಹಾಗಾಗಿ ಮಹಮ್ಮದ್ ಆಲೂರು ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ದೂರು ನೀಡಿದರು. ಪೊಲೀಸರು ಎಫ್.ಐ.ಆರ್. ಹಾಕಿ ಕುಳಿತರು. ಆ ದಿನದಿಂದ ಮಹಮ್ಮದ್ ಅಲಿ ಎಷ್ಟೋ ಬಾರಿ ಪೊಲೀಸ್ ಠಾಣೆಗೆ ಅಲೆದರೋ ಲೆಕ್ಕವಿಲ್ಲ. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೂ ವಿನಂತಿ ಮಾಡಿದರು. ಮಹಿಳಾ ಆಯೋಗಕ್ಕೂ ಪತ್ರ ಬರೆದರು. ಕೆಲವು ಟಿ.ವಿ.ಗಳಲ್ಲೂ ವಿಷಯ ಪ್ರಸಾರ ಆಯಿತು. ರಂಸೀನಾ ಕಾಣೆಯಾದ ದಿನದಿಂದ ರಘು ಕಣ್ಮರೆ ಆದವನು ವಾಪಸ್ಸು ಬಂದಿಲ್ಲ. ಇತ್ತೀಚೆಗೆ ಆತನ ತಂದೆ -ತಾಯಿ ಕೂಡ ಮನೆ ಬಿಟ್ಟು ಹೋಗಿದ್ದಾರೆ. ಮೂರು ತಿಂಗಳಿನಿಂದ ಮಹಮ್ಮದ್ ಅಲಿ ಕುಟುಂಬದವರ ಕಣ್ಣೀರು ನಿಂತಿಲ್ಲ.

ಜೈನ ಕಾಶಿ ಬೆಳಗೊಳದ ಸುತ್ತ ಒಂದು ಸುತ್ತು...

ಶ್ರವಣಬೆಳಗೊಳ : ಅಲ್ಲೆಲ್ಲಾ ತ್ಯಾಗಿಗಳು, ಮಾತಾಜಿಗಳು, ಜೈನ ಭಕ್ತರು, ವ್ಯಾಪಾರಿಗಳು, ಡೋಲಿವಾಲಾಗಳು, ಟಾಂಗಾವಾಲಾಗಳು ಎಲ್ಲೆಂದರಲ್ಲಿ ಕಾಣಸಿಗುತ್ತಾರೆ.

ದಕ್ಷಿಣ ಭಾರತದ ಜೈನಕಾಶಿ ಶ್ರವಣಬೆಳಗೊಳದಲ್ಲಿ ಪ್ರತಿನಿತ್ಯವೂ ಇದನ್ನು ಕಾಣಬಹುದು. ಗೊಮ್ಮಟೇಶ್ವರ ಭಗವಾನ್ ಶ್ರೀ ಬಾಹುಬಲಿ ಸ್ವಾಮಿ ಮಹಾ ಮಸ್ತಕಾಭಿಷೇಕ ಆರಂಭಗೊಂಡಿದೆ. ಇದರಿಂದ ಬೆಳಗೊಳ ಈಗ ಕಳೆಗಟ್ಟಿದೆ.

ಫೆಬ್ರವರಿ 6ರಿಂದ ಆರಂಭಗೊಂಡಿರುವ ಕಾರ್ಯಕ್ರಮಗಳು ಪಂಚಕಲ್ಯಾಣ ನಗರದ ಚಾವುಂಡರಾಯ ಸಭಾ ಮಂಟಪದಲ್ಲಿ ನಡೆದಿವೆ. ಇದೇ 16ರವರೆಗೆ ವಿವಿಧ ಆರಾಧನೆಗಳು, ಆಚಾರ್ಯಶ್ರೀ ಹಾಗೂ ಮಾತಾಜಿಯವರ ಪ್ರವಚನಗಳು ನಡೆಯಲಿವೆ.

ಬೆಳಗೊಳದಲ್ಲಿ ಎತ್ತಿಂದೆತ್ತ ನೋಡಿದರೂ ಬಾಹುಬಲಿ ಸ್ವಾಮಿಯ ಸ್ಮರಣೆ ನಡೆಯುತ್ತಿದೆ. ಜಿನ ಭಕ್ತರು ಬಾಹುಬಲಿ ಸ್ವಾಮಿಗೆ ಜೈಕಾರ ಹಾಕಿ ಧನ್ಯತಾ ಭಾವ ಮೆರೆಯುತ್ತಿದ್ದಾರೆ. ತ್ಯಾಗಿಗಳ ಪ್ರವಚನದಿಂದ ಉತ್ಸುಕರಾಗಿದ್ದಾರೆ..

ಈ ನಡುವೆ ತ್ಯಾಗಿ ನಗರದ ಬಗ್ಗೆ ಎಲ್ಲರಿಗೂ ಭಕ್ತಿ ಭಾವ. 500ಕ್ಕೂ ಹೆಚ್ಚು ನಿರ್ವಾಣ ಸ್ವಾಮಿಗಳು ಇಲ್ಲಿ ತಂಗಿದ್ದಾರೆ. ಅವರು ಪಂಚಕಲ್ಯಾಣ ನಗರದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ. ಚಂಡೆ ವಾದ್ಯ, ಕೊಂಬು ಕಹಳೆ ಮುಗಿಲು ಮುಟ್ಟುತ್ತಿವೆ. ಜಾನಪದ ಕಲಾವಿದರ ಹಾಡುಗಳು ಗಮನ ಸೆಳೆಯುತ್ತಿವೆ.

ರಾಷ್ಟ್ರಪತಿ ರಾಮನಾಥ್ ಕೋವಿಂದ್, ಉಪ ರಾಷ್ಟ್ರಪತಿ ವೆಂಕಯ್ಯನಾಯ್ಡು ಅವರು ಆದಿನಾಥರ ಬೆಳ್ಳಿ ಮೂರ್ತಿಗೆ ಪೂಜೆ ನೆರವೇರಿಸಿ ಧನ್ಯತಾ ಭಾವ ಸಮರ್ಪಿಸಿದ್ದಾರೆ.

ಶ್ರವಣಬೆಳಗೊಳದ ಪಂಚಕಲ್ಯಾಣ ಸಭಾ ಮಂಟಪದಲ್ಲಿ ಭಾನುವಾರ ಕೇವಲ ಜ್ಞಾನ ಕಲ್ಯಾಣ ಮಹೋತ್ಸವ ಜರುಗಿತು. ಈ ವೇಳೆ ಜೈನಮುನಿಗಳು ಹಾಗೂ ಶ್ರೀಕ್ಷೇತ್ರದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಉಪಸ್ಥಿತರಿದ್ದರು.

24 ತೀರ್ಥಂಕರರಿಗೆ ಅಂಕುರಾರ್ಪಣೆ

ಮಹಾಮಸ್ತಕಾಭಿಷೇಕ ಅಂಗವಾಗಿ ಶ್ರವಣಬೆಳಗೊಳದ ಪಂಚಕಲ್ಯಾಣ ನಗರದ ಸಂಸ್ಕಾರ ಮಂಟಪದಲ್ಲಿ ಭಾನುವಾರ ಮುಂಜಾನೆ ಸುಪ್ರಭಾತದೊಂದಿಗೆ 24 ತೀರ್ಥಂಕರರಿಗೆ ಅಂಕುರಾರ್ಪಣೆಯ ನಂತರ ಅಭಿಷೇಕ ಜರುಗಿತು. ಕೇವಲ ಜ್ಞಾನ ಕಲ್ಯಾಣದ ಪ್ರಯುಕ್ತ ಆಹಾರ ದಾನ ನೆರವೇರಿತು. ಹೊರಗಡೆಯಿಂದ ಬಂದ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲಾಯಿತು. ನಂತರ ಆದಿನಾಥಸ್ವಾಮಿ ಮೂರ್ತಿಗೆ ಪ್ರಾಣ ಪ್ರತಿಷ್ಠೆ ಕಾರ್ಯಕ್ರಮ ನಡೆಯಿತು.

ಚಾವುಂಡರಾಯ ಸಭಾ ಮಂಟಪದ ಮುಖ್ಯ ವೇದಿಕೆಯಲ್ಲಿ ಸಮವಸರಣ ರಚನೆ ಮಾಡಲಾಯಿತು. ಪೂಜೆಯನ್ನು ಸೌಧರ್ಮ ಇಂದ್ರ, ಇಂದ್ರಾಣಿಯವರು ನೆರವೇರಿಸಿದರು. ಆಚಾರ್ಯ 108 ವಿಶುದ್ಧ ಸಾಹರ ಮಹಾರಾಜರು 122 ಕೆ.ಜಿ.ಯ ತಾಮ್ರದ ಪುಸ್ತಕವನ್ನು ಅನಾವರಣ ಮಾಡಿ ಆಶೀರ್ವದಿಸಿದರು. ಆಚಾರ್ಯ 108 ವರ್ಧಮಾನ ಸಾಗರ ಮಹಾರಾಜರು ಆಶೀರ್ವದಿಸಿದರು. ಪೂಜೆಯಲ್ಲಿ ಸರ್ವಾಣ್ಹಕ್ಕರಿಗೆ 5 ಸುತ್ತಿನ ಪೂಜೆ ನೆರವೇರಿತು. ಪೂಜೆಗೆ ಕೇರಳದ ಚಂಡೆ ವಾದ್ಯ, ಮೈಸೂರು ಬ್ಯಾಂಡ್‌ಸೆಟ್, ಹೆಚ್ಚು ಕಳೆ ತಂದಿತು.

ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ಮಾರ್ಗದರ್ಶನದಂತೆ ಪೂಜೆಗಳು ನೆರವೇರಿದವು. ನಂತರ ಅವರು ಸುದ್ದಿಗಾರರಿಗೆ ಮಾಹಿತಿ ನೀಡುತ್ತಾ, ಇಂದಿನ ಸಮವಸರಣ ರಚನೆಯ ಪೂಜೆಯಲ್ಲಿ ಒಟ್ಟು ಆಚಾರ್ಯ ವೃಂದವರು, ಮುನಿಗಳು, ಆರ್ಯಿಕಾ ಮಾತಾಜಿಯವರು ಸೇರಿದಂತೆ 375 ಮುನಿಗಳು ಭಾಗವಹಿಸಿದ್ದಾರೆ ಎಂದರು. *(-4ನೇ ಪುಟಕ್ಕೆ)*

ನಿಜವಾಗಿಯೂ ಇದು ಸಾಂಸ್ಕೃತಿಕ ಕೇಂದ್ರ

ಶ್ರವಣಬೆಳಗೊಳ ನಿಜವಾಗಿಯೂ ಸಾಂಸ್ಕೃತಿಕ ಕೇಂದ್ರ. ಅದರಲ್ಲಿ ಎರಡು ಮಾತಿಲ್ಲ. ಬೆಳಗೊಳದಲ್ಲಿ ಮಸ್ತಕಾಭಿಷೇಕ ಅಂಗವಾಗಿ ನಿರ್ಮಾಣಗೊಂಡಿರುವ ರಾಜ್ಯಾಭಿಷೇಕ ಅರಮನೆ ಸೂಜಿಗಲ್ಲಿನಂತೆ ಸೆಳೆದಿದೆ. ಚಾವುಂಡರಾಯ ವೇದಿಕೆ ಸಮೀಪದಲ್ಲಿಯೇ ಅರಮನೆಯ ದರ್ಬಾರಿನ ರಾಜ್ಯಾಭಿಷೇಕ ಅರಮನೆಯನ್ನು ತೋರಿಸುವ ರಂಗಸಜ್ಜಿಕೆಯು ಸೊಗಸಾಗಿ ಮೂಡಿ ಬಂದಿದೆ.

ವಿರಾಟ ವಿರಾಗಿ ಭಗವಾನ್ ಬಾಹುಬಲಿ ವಿಂಧ್ಯಗಿರಿ ಬೆಟ್ಟದಲ್ಲಿ ನೆಲೆಸಿದ್ದಾರೆ. ಇಷ್ಟು ಎತ್ತರದ ಏಕಶಿಲಾ ಮೂರ್ತಿ ಇಡೀ ವಿಶ್ವದಲ್ಲಿ ಬೇರೆಲ್ಲಿಯೂ ಇಲ್ಲ. ಹಾಗಾಗಿ ಈಗಲೂ ಕೂಡ ಈ ಕಲಾಸಿರಿಯನ್ನು ಹಾಡಿ ಹೊಗಳುವವರು ಒಬ್ಬಿಬ್ಬರಲ್ಲ.

ಜಿಲ್ಲೆಯ ಜನರು ಶ್ರವಣಬೆಳಗೊಳ ಸಾಂಸ್ಕೃತಿಕ ಕೇಂದ್ರವಾಗಿ ರೂಪುಗೊಳ್ಳಬೇಕೆಂದು ಅಭಿಪ್ರಾಯ ವ್ಯಕ್ತಪಡಿಸುತ್ತಲೇ ಇದ್ದರು. ಕೆಲವು ಸಂಘಟನೆಗಳು ಕೂಡ ಒತ್ತಡ ಹೇರುತ್ತಿವೆ. ಇತ್ತೀಚೆಗೆ ಬೆಳಗೊಳಕ್ಕೆ ಬಂದಿದ್ದ ರಾಷ್ಟ್ರಪತಿ ರಾಮನಾಥ್ ಕೋವಿಂದ್ ಶ್ರವಣಬೆಳಗೊಳ ಭಾರತದ ಸಾಂಸ್ಕೃತಿಕ ಕೇಂದ್ರ ಎಂದು ಹೇಳಿದ್ದರು.

ಸಾಂಸ್ಕೃತಿಕ ಕೇಂದ್ರಕ್ಕೆ ಬೆಳಗೊಳ ಹೇಳಿ ಮಾಡಿಸಿದಂತಿದೆ. ಈ ಸಹಸ್ರಮಾನದ ಎರಡನೇ ಮಹಾ ಮಸ್ತಕಾಭಿಷೇಕ ಮುಗಿದ ನಂತರ ಸಾಂಸ್ಕೃತಿಕ ಕೇಂದ್ರ ಅಭಿವೃದ್ಧಿಗೆ ಯೋಜನೆಯನ್ನು ಈಗಿನಿಂದಲೇ ರೂಪಿಸಬೇಕು.

ಈ ನಡುವೆ ವರ್ಧಮಾನ ಮಹಾಸಾಗರರು ಕೂಡ ಸಾಂಸ್ಕೃತಿಕ ಕೇಂದ್ರ ಆಗಬೇಕು ಎಂದಿದ್ದಾರಲ್ಲದೆ, ಶ್ರವಣಬೆಳಗೊಳದ 5 ಕಿ.ಮೀ. ವ್ಯಾಪ್ತಿಯಲ್ಲಿ ಪ್ರಾಣಿವಧೆ ನಿಷೇಧಿಸಬೇಕು ಎಂದು ಹೇಳಿರುವುದು ಕೂಡ ಇದೇ ಕಾರಣಕ್ಕೆ ಎಂದು ಜಿನ ಭಕ್ತರು ಹೇಳುತ್ತಿದ್ದಾರೆ.

ಫೆಬ್ರವರಿ 17ರಿಂದ ಶ್ರವಣಬೆಳಗೊಳದಲ್ಲಿ ವಿರಾಟ ವಿರಾಗಿಗೆ ಮಹಾ ಮಜ್ಜನ ನಡೆಯಲಿದೆ.

ಹೆಲಿ ಟ್ಯೂರಿಸಂಗೆ ಆದ್ಯತೆ

ಏನೇ ಇರಲಿ, ಕೊನೆಗೂ ಪ್ರವಾಸೋದ್ಯಮ ಇಲಾಖೆ ಈ ಬಾರಿ ಹೆಲಿಟ್ಯೂರಿಸಂಗೆ ಆದ್ಯತೆ ನೀಡಿದೆ.

ಪ್ರವಾಸೋದ್ಯಮ ಅಭಿವೃದ್ಧಿಗೆ ವಿಪುಲ ಅವಕಾಶವಿದ್ದರೂ, ಆ ಬಗ್ಗೆ ಗಮನ ಹರಿಸಿರಲಿಲ್ಲ. ಜಿಲ್ಲಾಧಿಕಾರಿ ರೋಹಿಣಿ ಸಿಂಧೂರಿ ಅವರು ಪ್ರವಾಸೋದ್ಯಮಕ್ಕೆ ಆದ್ಯತೆ ನೀಡಿ ಕೆಲಸ ಮಾಡುವುದಾಗಿ ಹೇಳಿದ್ದರು. ಈಗ ಪ್ರವಾಸೋದ್ಯಮದ ಕೆಲಸ ಗರಿಗೆದರಿಕೊಂಡಿದೆ.

ಬೆಳಗೊಳಕ್ಕೆ ಹೋಗುವ ಮಾರ್ಗದಲ್ಲಿರುವ ಜನಿವಾರ ಕೆರೆಯನ್ನು ಅಭಿವೃದ್ಧಿಪಡಿಸಲಾಗಿದೆ. ಇತಿಹಾಸ ಪ್ರಸಿದ್ಧ ಈ ಕೆರೆಯಲ್ಲಿ ಬೋಟಿಂಗ್ ವ್ಯವಸ್ಥೆಗಾಗಿ ಈಗ ಎಲ್ಲಾ ಸಿದ್ಧತೆಗಳನ್ನೂ ನಡೆಸಲಾಗಿದೆ. ಬೋಟಿಂಗ್ ವ್ಯವಸ್ಥೆ ಇಲ್ಲಿನ ಪ್ರಮುಖ ಆಕರ್ಷಣೆ ಆಗಲಿದೆ. ಜಿಲ್ಲಾ ಉಸ್ತುವಾರಿ ಸಚಿವ ಎ.ಮಂಜು ಅವರು ಸೋಮವಾರ ಇದಕ್ಕೆ ಚಾಲನೆ ನೀಡಲಿದ್ದಾರೆ.

2018ರ ಮಸ್ತಕಾಭಿಷೇಕ ಬರೀ ಮಹೋತ್ಸವ ಆಗುತ್ತಿಲ್ಲ. ಅದ್ದೂರಿ ಆಚರಣೆಯಾಗಲಿದೆ. ಇವೆಲ್ಲಾ ಏನೇ ಇರಲಿ, ಇದರ ಜೊತೆಗೆ ಆ ಭಾಗದ ಜನರ ವಹಿವಾಟು ವೃದ್ಧಿಯಾಗಬೇಕು. ಹಾಗಾಗಿ ಜಿಲ್ಲಾಡಳಿತ ವಿಶೇಷ ಆಸಕ್ತಿ ವಹಿಸಿದೆ.

ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕರೊಂದಿಗೆ ಚರ್ಚೆ

ಶ್ರವಣಬೆಳಗೊಳದ ಚಾವುಂಡರಾಯ ಸಭಾ ಮಂಟಪದಲ್ಲಿ ಮಹಾ ಮಸ್ತಕಾಭಿಷೇಕ ಮಹೋತ್ಸವದ ಅಂಗವಾಗಿ ಸ್ವಸ್ತಿಶ್ರೀ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರು, ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಹೆಚ್ಚುವರಿ ಪೊಲೀಸ್ ಮಹಾ ನಿರ್ದೇಶಕ ಭಾಸ್ಕರ್‌ರಾವ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಶಹಾಪುರ್‌ವಾಡ್ ಹಾಗೂ ಪೊಲೀಸ್ ಸಿಬ್ಬಂದಿಗಳೊಂದಿಗೆ ಸಮಾಲೋಚನೆ ನಡೆಸಿದರು.

ಈ ಸಂದರ್ಭದಲ್ಲಿ ಚಾರುಕೀರ್ತಿ ಶ್ರೀಗಳು, ಮಹಾ ಮಸ್ತಕಾಭಿಷೇಕ ಯಶಸ್ಸಿಗೆ ಸಹಕರಿಸುವಂತೆ ಪೊಲೀಸ್ ಮಹಾ ನಿರ್ದೇಶಕರಿಗೆ ಮನವಿ ಮಾಡಿದರು.

ಮಹಾಮಸ್ತಕಾಭಿಷೇಕ ರಾಷ್ಟ್ರೀಯ ಸಮಿತಿ ಕಾರ್ಯಾಧ್ಯಕ್ಷ ಎಸ್.ಜಿತೇಂದ್ರ ಕುಮಾರ್ ಹಾಗೂ ಇತರರು ಉಪಸ್ಥಿತರಿದ್ದರು.

ಗಮನ ಸೆಳೆದ ಸಾಂಸ್ಕೃತಿಕ ಕಾರ್ಯಕ್ರಮ

ಜೈನಕಾಶಿ ಶ್ರವಣಬೆಳಗೊಳದಲ್ಲಿ ಭಗವಾನ್ ಬಾಹುಬಲಿ ಸ್ವಾಮಿಗೆ ನಡೆಯುತ್ತಿರುವ ಮಹಾಮಸ್ತಕಾಭಿಷೇಕದ ಸಂದರ್ಭದಲ್ಲಿ ಹಲವು ಬಗೆಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತಿದ್ದು, ಮಹೋತ್ಸವದ ನಾಲ್ಕನೇ ದಿನವಾದ ಶನಿವಾರ ರಾತ್ರಿ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು.

ಶಾಸಕ ಸಿ.ಎನ್.ಬಾಲಕೃಷ್ಣ ಕಾರ್ಯಕ್ರವನ್ನು ವೀಕ್ಷಿಸಿದ ನಂತರ ಕಲಾವಿದರನ್ನು ಸನ್ಮಾನಿಸಿ ಮಾತನಾಡುತ್ತಾ , ಯಾರು ಕಲೆಯನ್ನು ಆಸ್ವಾದಿಸುತ್ತಾರೋ ಅಂತಹವರು ರೋಗ ಮುಕ್ತರಾಗುತ್ತಾರೆ. ಹಳೆಯ ಸುಮಧುರ ಹಾಡುಗಳು ಇಂದಿಗೂ ಜನರಲ್ಲಿ ಹೆಚ್ಚು ಪ್ರಚಲಿತದಲ್ಲಿವೆ ಎಂದರು.

ಚನ್ನರಾಯಪಟ್ಟಣದವರಾದ ಹಾಸ್ಯ ನಟ ಮತ್ತು ಚಲನಚಿತ್ರ ನಿರ್ದೇಶಕ ನಾಗರಾಜ್ ಕೋಟೆ ಮತ್ತು ತಂಡದವರು ನೆರೆದಿದ್ದ ಪ್ರೇಕ್ಷಕರನ್ನು ನಕ್ಕು ನಲಿಸಿದರು. ಕಾರ್ಕಳದ ಕದ್ರಿ ನೃತ್ಯ ವಿದ್ಯಾಲಯದ ತಂಡ ನೃತ್ಯರೂಪಕದ ಮೂಲಕ ಗಮನ ಸೆಳೆಯಿತು.

ನಾಡಿನ ಖ್ಯಾತ ಚಲನಚಿತ್ರ ಹಿನ್ನೆಲೆ ಗಾಯಕರಾದ ಬಿ.ಆರ್.ಛಾಯ, ಚಂದ್ರಿಕಾ ಗುರುರಾಜ್, ಜೋಗಿ ಸುನೀತಾ, ಮೋಹನ್ ಕೃಷ್ಣ ಹಾಗೂ ರಮೇಶ್‌ಚಂದ್ರ ತಂಡದವರು 80 ಮತ್ತು 90ರ ದಶಕದ ಎಂದೂ ಮರೆಯದ ಹಾಡುಗಳನ್ನು ಹಾಡುವ ಮೂಲಕ ಪ್ರೇಕ್ಷಕರನ್ನು ಸಂಗೀತದ ಕಡಲಿನಲ್ಲಿ ತೇಲಿಸಿದರು. ಕನ್ನಡ ಚಲನಚಿತ್ರಗಳ ಅತ್ಯುತ್ತಮ ಗೀತೆಗಳನ್ನು ಹಾಡುವ ಮೂಲಕ ಈ ಗಾಯಕರು ಚಪ್ಪಾಳೆ ಗಿಟ್ಟಿಸಿದರು.

ಅಲ್ಲದೆ ರಾತ್ರಿ ಹನ್ನೊಂದು ಗಂಟೆಯವರೆಗೂ ಪ್ರೇಕ್ಷಕ ಸಮೂಹ ಕದಲದೆ ಕುಳಿತು ಕಾರ್ಯಕ್ರಮವನ್ನು ಆನಂದಿಸಿದರು ಹಾಗೂ ಬಹುತೇಕ ಹಾಡುಗಳಿಗೆ ಪ್ರೇಕ್ಷಕರು ಮತ್ತೊಮ್ಮೆ ಹಾಡುವಂತೆ ಒತ್ತಾಯಿಸಿದ್ದು ಕಾರ್ಯಕ್ರಮದ ವಿಶೇಷವಾಗಿತ್ತು.